**ಸಿ.ಸಿ.ನಂ.: 226/2025**

ಪಿ.ಡಬ್ಲ್ಯೂ: **1**

(ಇಂದು ದಿನಾಂಕಃ **07-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ.ಆರ್.ಎಸ್. ವಕೀಲರಿಂದ**

1. ಈ ಪ್ರಕರಣದ ಸಾಲದ ವ್ಯವಹಾರ ನಡೆಯುವ ಸಂದರ್ಭದಲ್ಲಿ ಫಿರ್ಯಾದಿ ಸಂಸ್ಥೆಯ ಕುಮಟಾ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಆ ಕಾರಣದಿಂದಾಗಿ ನನಗೆ ಈ ಪ್ರಕರಣದ ಕುರಿತಾಗಿ ವಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಈ ಪ್ರಕರಣದ ಆರೋಪಿತನು ಸಾಲಗಾರರು ಪಡೆದುಕೊಂಡ ಸಾಲಕ್ಕೆ ಜಾಮೀನುದಾರನಾಗಿರುತ್ತಾನೆ. ಈ ಪ್ರಕರಣದ ಸಾಲಗಾರರ ವಿರುದ್ಧ ಸಿವಿಲ್ ಸ್ವರೂಪದ ದಾವೆಯನ್ನು ಹಾಕಿರುತ್ತೇನೆ.

2. ಈ ಪ್ರಕರಣದ ಸಾಲಗಾರನು ಕೂಲಿ ಕೆಲಸವನ್ನು ಮಾಡುತ್ತಿದ್ದನು. ಈ ಪ್ರಕರಣದ ಸಾಲಗಾರನ ಆದಾಯದ ಕುರಿತಾಗಿ ಯಾವುದೇ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಸಾಲ ಕೊಡುವ ಸಂದರ್ಭದಲ್ಲಿ ಸಾಲಗಾರರ ಆರ್ಥಿಕ ಸಾಮರ್ಥ್ಯವನ್ನು ತಿಳಿದುಕೊಂಡು ಸಾಲವನ್ನು ನೀಡಬೇಕಾಕಾಗುತ್ತದೆ ಎಂದರೆ ಸರಿ. ಸಾಲಗಾರನು ಸಾಲವನ್ನು ಪಡೆಯಲು ಫಿರ್ಯಾದಿ ಸಂಸ್ಥೆಗೆ ದಿನಾಂಕಃ 27/12/2023 ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಾಲವು ಮಂಜೂರಾಗಲು 15 ದಿನಗಳ ಕಾಲಾವಕಾಶ ಬೇಕು ಎಂದರೆ ಸರಿಯಲ್ಲ.

**ಸಿ.ಸಿ.ನಂ.: 226/2025**

ಪಿ.ಡಬ್ಲ್ಯೂ: 1

3. ಆರೋಪಿತ ಹಾಗೂ ಈ ಪ್ರಕರಣದ ಸಾಲಗಾರನು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಹೊಂದಿದ್ದನು. ಆರೋಪಿತನು ಮನೆ ರಿಪೇರಿಯ ಉದ್ದೇಶಗಾಗಿ ಸಾಲವನ್ನು ಪಡೆದಿರುತ್ತಾನೆ. ಈ ಕುರಿತಾಗಿ ನಾನು ವಿಚಾರಿಸಿರುತ್ತೇನೆ. ಈ ಕುರಿತಾಗಿ ನಾನು ದಾಖಲಾತಿಯನ್ನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯಕ್ಕೆ ಸದ್ರಿ ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

4. ಸಾಲಗಾರರಿಗೆ ಸಾಲವನ್ನು ಕೊಡಬೇಕಾದರೆ ಅವರಿಂದ ಆಧಾರ ಕಾರ್ಡ, ಮನೆ ತೇರಿಗೆ ರಶೀದಿ ಹಾಗೂ ರೇಶನ ಕಾರ್ಡಗಳನ್ನು ಪಡೆದುಕೊಳ್ಳುತ್ತೇವೆ. ಸಾಮಾನ್ಯವಾಗಿ ಭದ್ರತೆಗಾಗಿ ಆದಾಯದ ಪ್ರಮಾಣ ಪತ್ರವನ್ನು ತೆಗೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಭದ್ರತೆಯ ಆಧಾರದ ಮೇಲೆಯೂ ಸಾಲವನ್ನು ನೀಡುತ್ತೇವೆ ಎಂದು ಸಾಕ್ಷಿಯು ನುಡಿಯುತ್ತಾರೆ. ಆರೋಪಿತನು ಯಾವ ಕೆಲಸನ್ನು ಮಾಡುತ್ತಾನೆ ಹಾಗೂ ಆತನ ಆದಾಯದ ಕುರಿತಾಗಿ ವಿಚಾರಿಸಿರುತ್ತೇವೆ. ಈ ಕುರಿತಾಗಿ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

5. ಸಾಲಗಾರರು ಫಿರ್ಯಾದಿ ಸಂಸ್ಥೆಯಲ್ಲಿ 50 ಸಾವಿರಕ್ಕಾಗಿ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಾಲಗಾರರು ಸಾಲವನ್ನು ಕೇಳಿದಷ್ಟು ಸಾಲವನ್ನು ಭರಣ ಮಾಡುವ ಸಾಮರ್ಥ ಇದ್ದರೆ ಮಾತ್ರ ಅವರು ಕೇಳಿದಷ್ಟು ಹಣವನ್ನು ಮಂಜೂರು ಮಾಡುತ್ತೇವೆ ಎಂದರೆ ಸರಿ. ಸಾಲದ ಅರ್ಜಿಗಳು ಸಾಮಾನ್ಯವಾಗಿ ತಿರಸ್ಕತಗೊಳ್ಳುವ ಸಂದರ್ಭದಲ್ಲಿ ಇರುತ್ತವೆ ಎಂದರೆ ಸರಿ. ಸದ್ರಿ ತಿರಸ್ಕತಗೊಂಡ ಸಾಲದ ಅರ್ಜಿಗಳು ನಮ್ಮ ಪ್ರಧಾನ ಕಛೇರಿಯಲ್ಲಿ ಇರುತ್ತವೆ.

**ಸಿ.ಸಿ.ನಂ.: 226/2025**

ಪಿ.ಡಬ್ಲ್ಯೂ: 1

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ